ಭದ್ರಾ ಮೇಲ್ದಂಡೆ ಯೋಜನೆ ಕುರಿತು,

೯೩೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಮೇಲ್ದಂಡೆ ಯೋಜನೆಯು ಈಗ ಯಾವ ಹಂತದಲ್ಲಿದೆ.

ಆ) ಈ ಯೋಜನೆಯಿಂದ ಒಟ್ಟು ಎಷ್ಟು ಎಕರೆ ಭೂಮಿಗೆ ನೀರಾವರಿಯು ಉಪಯೋಗವಾಗುತ್ತದೆ ?

ಇ) ಆ ಪೈಕಿ ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಎಕರೆ ಭೂಮಿಯು ನೀರಾವರಿಯಾಗಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ) ೧೧೯೦ ಕೋಟಿ ರೂ.ಗಳ ಯೋಜನಾ ವರದಿಯು ಪರಿಶೀಲನೆಯಲ್ಲಿದೆ,

ಆ) ೫,೩೭,೦೦೦ ಎಕರೆಗಳು.

ಇ) ಸುಮಾರು ೧೮.೫೮೭ ಎಕರೆಗಳು.

ಚಿಕ್ಕಮಗಳೂರು ಜಿಲ್ಲೆಯ ಏತ ನೀರಾವರಿ ಯೋಜನೆಗಳು.

೯೪೦. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).––ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಏತ ನೀರಾವರಿಗಳು ಎಷ್ಟಿವೆ.

ಆ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಏತ ನೀರಾವರಿಗಳನ್ನು ಸ್ಥಾಪಿಸಲು ಯೋಜನೆ ಮಾಡಲಾಗಿದೆ.

ಇ) ಪ್ರಸಕ್ತ ಹಣಕಾಸಿನ ಸಾಲಿನಲ್ಲಿ ಎಷ್ಟನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಮಂತ್ತು ಏತ ನೀರಾವರಿ ಮಂತ್ರಿ).—

ಅ) ನಾಲ್ಕು.

ಆ) ಯಾವುದೂ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಬಚಾವತ್ ಆಯೋಗದ ವರದಿ;

೬೬೫. ಶ್ರೀ ಎಸ್, ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಲೋಕೋಪಯೋಗಿ ಹಂತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಕಣಿವೆಯ ನೀರನ್ನು ಬಚಾವತ್ ಆಯೋಗ ಯಾವ ಯಾವ ರಾಜ್ಯಗಳಿಗೆ ಎಷ್ಟು ಕೊಟ್ಟಿದೆ ಹಾಗೂ ಯಾವ ಯಾವ ರಾಜ್ಯಗಳು ಎಷ್ಟು ನೀರನ್ನು ಉಪಯೋಗಿಸಿದೆ (೧೯೮೬–೮೭ರ ವರೆಗೆ ಒದಗಿಸುವುದು)

ಆ) ರಾಜ್ಯದ ಪಾಲಿನ ನೀರು ಉಪಯೋಗಿಸಿದ್ದು ಅಲ್ಪ ಆನ್ನುವುದು ನಿಜವಲ್ಲವೆ.

ಇ) ಮಹಾರಾಷ್ಟ್ರ ಸರ್ಕಾರವು ದೊಡ್ಡ ಪ್ರಮಾಣದ ಎರಡು ಏತ ನೀರಾವರಿ ಪ್ರಾರಂಭಿಸಿರುವುದರಿಂ ಸರ್ಕಾರದ ಗಮನಕ್ಕೆ ಬಂದಿದೆಯೇ. ಅದು ಅವರಿಗೆ ಕೊಡ ಮಾಡಿದ ನೀರಿನ ಪ್ರಮಾಣದ ವ್ಯಾಪ್ತಿಯಲ್ಲಿದೆಯೇ ಅಥವಾ ಹೆಚ್ಚಿನ ನೀರನ್ನು ಉಪಯೋಗಿಸಿರುವರೆ ?

ಈ) ಕೃಷ್ಣಾದ ಸಂಪೂರ್ಣ ನೀರಿನ ಬಳಕೆ ಮಾಡುವುದಕ್ಕೆ ಬದ್ಧ ಅಂತಾ ಸರ್ಕಾರದವರು ತಿಳಿಸಿದು ನಿಜವೆ, ಹಾಗಿದ್ದಲ್ಲಿ ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆಯೇ ?